# ಮಾಹಿತಿ ಹಕ್ಕು ಕಾಯ್ದೆ ಪಶ್ಚಿಮ ವಲಯ ಕಛೇರಿ

## ಮಾಹಿತಿ ಹಕ್ಕು ಕಾಯ್ಕೆ ೨೦೦೫ ಸೆಕ್ಷನ್ ೪(೧) ಬಿ ಅನ್ವಯ ಪ್ರಕಟಿಸಿದ್ದು

೧) <u>ಮಾಹಿತಿ ಹಕ್ಕು ಕಾಯ್ದೆಗೆ ಆರೋಗ್ಯಾಧಿಕಾರಿ ಪಶ್ಚಿಮ ವಲಯ ಕಛೇರಿಯ ಕಾರ್ಯಗಳು ಮತ್ತು ಕರ್ತವ್ಯಗಳು</u>

ಅ) ಕಛೇರಿಯ ಹೆಸರು : ಮಾಹಿತಿ ಹಕ್ಕು ಕಾಯ್ದೆ ಕೇಂದ್ರ. ಆರೋಗ್ಯಾಧಿಕಾರಿ (ಪಶ್ಚಿಮ) ವಲಯ, ಭಾಷ್ಯಂ ಪಾರ್ಕ್ ಪಕ್ಕ ಶೇಷಾದ್ರಿಪುರಂ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬೆಂಗಳೂರು.
ದೂರವಾಣಿ ಸಂಖ್ಯೆ: ೨೨೯೭೫೬೫೫೦

ಆ) ರಚನೆ : ಆರೋಗ್ಯಾಧಿಕಾರಿ (ಪಶ್ಚಿಮ)

೧) ವ್ಯವಸ್ಥಾಪಕರು
೨) ಶೀಘ್ರಲಿಪಿಗಾರರು
೩) ಪ್ರಥಮ ದರ್ಜೆ ಸಹಾಯಕರು
೪) ದ್ವಿತೀಯ ದರ್ಜೆ ಸಹಾಯಕರು
೫) ನಾಲ್ಕನೇ ದರ್ಜೆ ಸಹಾಯಕರು.

ಇ) ಕಾರ್ಯಗಳು ಮತ್ತು ಕರ್ತವ್ಯಗಳು :- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆರೋಗ್ಯಾಧಿಕಾರಿ(ಪಶ್ಚಿಮ) ವ್ಯಾಪ್ತಿಗೆ ಸಂಬಂಧಿಸಿದಂತೆ ಸಾರ್ವಜನಿಕರು ತೋರುವ ಮಾಹಿತಿಗಳ ಅರ್ಜಿಯನ್ನು ಸಂಬಂಧಪಟ್ಟ ಆರೋಗ್ಯ ವೈದ್ಯಾಧಿಕಾರಿಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಸಾರ್ವಜನಿಕರಿಗೆ ನೀಡುವುದು, ಸದರಿ ಅರ್ಜಿಗಳ ಬಗ್ಗೆ ಗಮನ ಹರಿಸಿ ಸಾರ್ವಜನಿಕರಿಗೆ ಮಾಹಿತಿಯನ್ನು ಒದಗಿಸುವ ಕಾರ್ಯವನ್ನು ನಿರ್ವಹಿಸಲಾಗುತ್ತದೆ.

೨) ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ಹಾಗೂ ಅವುಗಳ ಕರ್ತವ್ಯಗಳು:-

೧) ಶ್ರೀಮತಿ ಡಾ|| ಟಿ.ದೇವಕಿ ಉಮೇಶ್:-

ಆರೋಗ್ಯಾಧಿಕಾರಿ (ಪಶ್ಚಿಮ) ವಲಯಕ್ಕೆ ಸಂಬಂಧಿಸಿದ ಎಲ್ಲಾ ಆರೋಗ್ಯ ವೈದ್ಯಾಧಿಕಾರಿಗಳು ನೀಡುವ ಮಾಹಿತಿ ಹಕ್ಕು ಕಾಯ್ದೆ ಕೇಂದ್ರದ ಮುಖ್ಯಸ್ಥರಾಗಿರುತ್ತಾರೆ. ಪಶ್ಚಿಮ ವಲಯಕ್ಕೆ ಸಂಬಂಧಿಸಿದ ಉದ್ದಿಮೆಗಳ ಪರವಾನಗಿ ನೀಡುವಿಕೆ, ಸಾಂಕ್ರಾಮಿಕ ರೋಗಗಳ ನಿಯಂತ್ರಣದ ಬಗ್ಗೆ ಮುನ್ನೆಚ್ಚರಿಕೆ ಕ್ರಮ ವಹಿಸುವುದು. ಅನಧಿಕೃತ ಉದ್ದಿಮೆಗಳ ಮುಟ್ಟುಗೋಲು ಹಾಕಿಕೊಳ್ಳುವುದು. ಇದಲ್ಲದೇ ಕ್ಷಯರೋಗದ ನಿಯಂತ್ರಣದ ಉಪಾಧ್ಯಕ್ಷರಾಗಿ ಅಧಿಕಾರವನ್ನು ಹೊಂದಿರುತ್ತಾರೆ.

೨) ಶ್ರೀಮತಿ ಎಸ್.ನಾಗಲಕ್ಷ್ಮಿ ವ್ಯವಸ್ಥಾಪಕರು:-

ಆರೋಗ್ಯಾಧಿಕಾರಿ (ಪಶ್ಚಿಮ) ವಲಯದ ಮಾಹಿತಿ ಹಕ್ಕು ಅಧಿನಿಯಮಕ್ಕೆ ಸಂಬಂಧಿಸಿದ ಅರ್ಜಿಗಳಿಗೆ ವರದಿಯನ್ನು ನೀಡುವುದು ಆರೋಗ್ಯಾಧಿಕಾರಿ (ಪಶ್ಚಿಮ) ರವರ ಆದೇಶ ಮತ್ತು ಸೂಚನೆಯಂತೆ ಕೆಲಸ ನಿರ್ವಹಿಸುವುದು ಮೇಲಾಧಿಕಾರಿಗಳು ಕೋರುವ ಮಾಹಿತಿಗಳ ವರದಿಯನ್ನು ಒದಗಿಸುವುದು. ಆರೋಗ್ಯಾಧಿಕಾರಿ (ಪಶ್ಚಿಮ) ವಲಯದಲ್ಲಿ ಕಾರ್ಯ ನಿರ್ವಹಿಸುವ ನೌಕರರ ಮೇಲ್ವಿಚಾರಣೆಯನ್ನು ನಿರ್ವಹಿಸುವುದು.

೩) ಶ್ರೀಮತಿ ಪ್ರಮಿಳಾ ವರದಿಗಾರರು:-

ಆರೋಗ್ಯಾಧಿಕಾರಿ (ಪಶ್ಚಿಮ) ರವರ ಆಪ್ತ ಸಹಾಯಕರು ಕನ್ನಡ ವರದಿಗಾರರಾಗಿ ಕಾರ್ಯನಿರ್ವಹಿಸುತ್ತಾರೆ. ಆರೋಗ್ಯಾಧಿಕಾರಿಯವರು ಕರೆಯುವ ಸಭೆಗಳಿಗೆ ಹಾಜರಾಗುವುದು, ಸಭೆಯ ನಡವಳಿಕೆಗಳನ್ನು ತಯಾರಿಸಿ ಸಹಿಗಾಗಿ ಮಂಡಿಸುವುದು, ಆರೋಗ್ಯಾಧಿಕಾರಿ(ಪಶ್ಚಿಮ)ರವರು ಸೂಚಿಸುವ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು.

೪) ಶ್ರೀ.ಎಸ್.ಮಂಜುನಾಥ ಪ್ರಥಮ ದರ್ಜೆ ಗುಮಾಸ್ತರು:-

ಆರೋಗ್ಯಾಧಿಕಾರಿ (ಪಶ್ಚಿಮ)ವಲಯಕ್ಕೆ ಸಂಭಂದಪಟ್ಟ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ಸೇವಾ ಮತ್ತು ಆಡಳಿತಾತ್ಮಕ ಕಾರ್ಯಗಳ ನಿರ್ವಹಣೆ ಆರೋಗ್ಯಾಧಿಕಾರಿ (ಪಶ್ಚಿಮ)ರವರ ಆದೇಶದಂತೆ ಕಾರ್ಯ ನಿರ್ವಹಿಸುವುದು.

೫) ಶ್ರೀ.ಜೆ.ಬೋರಯ್ಯ ದ್ವಿತೀಯ ದರ್ಜೆ ಗುಮಾಸ್ತರು:-

ಆರೋಗ್ಯಾಧಿಕಾರಿ (ಪಶ್ಚಿಮ) ವಲಯಕ್ಕೆ ಸಂಬಂಧಪಟ್ಟ ಕಡತಗಳ ಸ್ವೀಕೃತಿ ಆರೋಗ್ಯಾಧಿಕಾರಿ (ಪಶ್ಚಿಮ)ವಲಯಕ್ಕೆ ಸಂಬಂಧಪಟ್ಟ ಕಡತಗಳನ್ನು ಟಪಾಲಿನ ಮುಖಾಂತರ ಸಂಬಂಧಪಟ್ಟ ಆರೋಗ್ಯ ವೈದ್ಯಾಧಿಕಾರಿಗಳಿಗೆ ವಿತರಿಸುವುದು. ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕಾಗಿ ಸಂಬಂಧಪಟ್ಟ ಆರೋಗ್ಯ ವೈದ್ಯಾಧಿಕಾರಿಗಳಿಂದ ವರದಿಗಳನ್ನು ಪಡೆಯುವುದು ಹಾಗೂ ಆರೋಗ್ಯಾಧಿಕಾರಿ (ಪಶ್ಚಿಮ) ರವರ ಆದೇಶದಂತೆ ಕೆಲಸವನ್ನು ನಿರ್ವಹಿಸುವುದು.

೬) ಶ್ರೀ.ಪಿ.ಮುರಳೀಧರನ್ ದ್ವಿತೀಯ ದರ್ಜೆ ಗುಮಾಸ್ತರು:-

ಆರೋಗ್ಯಾಧಿಕಾರಿ (ಪಶ್ಚಿಮ) ವಲಯದ ಕಛೇರಿಗೆ ಸಂಬಂಧಪಟ್ಟಂತೆ ದಿನನಿತ್ಯದ ವರದಿಗಳನ್ನ ಪಡೆಯುವುದು. ಕಛೇರಿಗೆ ಸಂಬಂಧಪಟ್ಟ ಉಗ್ರಾಣದ ವಸ್ತುಗಳ ವಿತರಣೆ ಹಾಗೂ ಆರೋಗ್ಯಾಧಿಕಾರಿ (ಪಶ್ಚಿಮ) ರವರ ಆದೇಶದಂತೆ ಕಾರ್ಯ ನಿರ್ವಹಿಸುವುದು.

೭) ಶ್ರೀಮತಿ ಟಿ.ಕೃಷ್ಣವೇಣಿ ನಾಲ್ಕನೇ ದರ್ಜೆ ನೌಕರರು:-

ಆರೋಗ್ಯಾಧಿಕಾರಿ (ಪಶ್ಚಿಮ) ವಲಯದ ಕಛೇರಿಯನ್ನು ಸ್ವಚ್ಛವಾಗಿಡುವುದು, ಕಛೇರಿ ವ್ಯವಸ್ಥಾಪಕರು ಮತ್ತು ವಿಷಯ ನಿರ್ವಾಹಕರು ಸೂಚಿಸುವ ಇತರೇ ಕೆಲಸಗಳನ್ನು ನಿರ್ವಹಿಸುವರು.

೮) ಶ್ರೀ.ಎಂ.ಗೋಪಿ ನಾಲ್ಕನೇ ದರ್ಜೆ ನೌಕರರು:-

ಆರೋಗ್ಯಾಧಿಕಾರಿ (ಪಶ್ಚಿಮ) ವಲಯದ ಕಛೇರಿಯಲ್ಲಿ ವೇತನ ಪಡೆದು ಕಾರ್ಯ ಪಾಲಕ ಅಭಿಯಂತರರು (ಚಿಕ್ಕಪೇಟೆ) ವಲಯದಲ್ಲಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

೯) ಶ್ರೀ.ಸಿ.ಶಿವಲಿಂಗ ಚಾಲಕರು:-

ಆರೋಗ್ಯಾಧಿಕಾರಿ (ಪಶ್ಚಿಮ) ವಲಯದ ಆರೋಗ್ಯಾಧಿಕಾರಿಗಳಿಗೆ ವಿತರಿಸಿರುವ ವಾಹನದ ಚಾಲಕರಾಗಿ ಕಾರ್ಯ ನಿರ್ವಹಿಸುತ್ತಾರೆ. ವಾಹನವನ್ನು ಸುಸ್ಥಿತಿಯಲ್ಲಿ ಕಾಪಾಡುವುದು, ವಾಹನಕ್ಕೆ ಅಗತ್ಯವಿರುವ ಇಂಧನವನ್ನು ಇಂಡೆಂಟ್ ಮೂಲಕ ಪಡೆದುಕೊಳ್ಳುವುದು, ಸಂಚರಿಸಿರುವ ಬಗ್ಗೆ ಲಾಗ್ ಪುಸ್ತಕವನ್ನು ನಿರ್ವಹಿಸುವುದು ಹಾಗೂ ಪ್ರತಿನಿತ್ಯ ಮೇಲಾಧಿಕಾರಿಗಳಿಂದ ರುಜುವನ್ನು ಪಡೆದು ಆರೋಗ್ಯಾಧಿಕಾರಿ (ಪಶ್ಚಿಮ) ರವರ ಆದೇಶದಂತೆ ಕಾರ್ಯ ನಿರ್ವಹಿಸುವುದು.

೩ ಮೇಲ್ವಿಚಾರಣೆ ಮತ್ತು ಜವಾಬ್ದಾರಿಗಳನ್ನು ಒಳಗೊಂಡಂತೆ ತೀರ್ಮಾನ ಕೈಗೊಳ್ಳುವಲ್ಲಿ ಅನುಸರಿಸುವ ಕ್ರಮಗಳು:-

ಕಛೇರಿ ಸಿಬ್ಬಂದಿಯವರು ಸಾರ್ವಜನಿಕರಿಂದ ಬಂದಂತಹ ಕಡತಗಳನ್ನು ಸ್ವೀಕರಿಸಿ ಸಂಬಂಧಪಟ್ಟ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ನೀಡುವುದು. ನಿಗಧಿತ ಸಮಯದೊಳಗೆ ಸಲ್ಲಿಸಲು ನೆನಪೋಲೆಗಳನ್ನು ಜಾರಿ ಮಾಡುವುದು. ನಿಗಧಿತ ಸಮಯದೊಳಗೆ ಸಾರ್ವಜನಿಕರಿಗೆ ಮಾಹಿತಿಗಳನ್ನು ಒದಗಿಸುವ ಬಗ್ಗೆ ಹೆಚ್ಚಿನ ಗಮನ ಹರಿಸುವುದು.

೪ ಕಾರ್ಯನಿರ್ವಹಿಸುವಲ್ಲಿ ಅನುಸರಿಸುವ ಮಾನದಂಡಗಳು:-

ಮಾಹಿತಿ ಪಡೆಯುವ ಹಕ್ಕು ಕಾಯ್ದೆ ೨೦೦೫ರಲ್ಲಿ ನಿಗಧಿ ಪಡಿಸಿರುವ ಮಾನದಂಡಗಳು ಹಾಗೂ ಮಾನ್ಯ ಆಯುಕ್ತರು ಮತ್ತು ಜಂಟಿ ಆಯುಕ್ತರು ಕಾಲ ಕಾಲಕ್ಕೆ ನೀಡುವ ಸೂಚನೆಗಳನ್ನು ಪಾಲಿಸಿ ಕ್ರಮ ವಹಿಸಲಾಗುತ್ತದೆ.

೫ ಮಾಹಿತಿ ಹಕ್ಕು ಅಧಿ ನಿಯಮ ೨೦೦೫ ಹಾಗೂ ಆಯುಕ್ತರಲ್ಲಿರುವ ಸೂಚನೆಗಳು.

೬ ಇಲಾಖೆ ಹೊಂದಿರುವ ದಸ್ತಾವೇಜುಗಳ ಪಟ್ಟಿ.

ಅ ಕಡತಗಳನ್ನು ಸ್ವೀಕರಿಸುವ ಹಾಗೂ ರವಾನಿಸುವ ನೊಂದಾಯಿತ ಪುಸ್ತಕ.
ಆ ಹಾಜರಾತಿ ಪುಸ್ತಕ.
ಇ ದೊಡ್ಡ ಹಾಜರಾತಿ ಪುಸ್ತಕ.
ಈ ಸಾಧಿಲ್‌ವಾರ್ ಬಿಲ್ಲಿನ ಪುಸ್ತಕ (ಡಿ.ಸಿ.ಬಿಲ್)
ಉ ದಾಸ್ತಾನು ಪುಸ್ತಕ (ಸ್ಟಾಕ್)
ಊ ವಿಷಯ ವಹಿಗಳು

೭ ಅದೇ ಕಾರ್ಯ ನೀತಿಯ ರಚನೆ ಅಥವಾ ಅದರ ಅನುಷ್ಟಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂತೆ ಯಾವುದೇ ವ್ಯವಸ್ಥೆಯ ವಿವರಗಳು.

೮ ಆರೋಗ್ಯಾಧಿಕಾರಿ (ಪಶ್ಚಿಮ) ವಲಯದ ಕಛೇರಿಯಲ್ಲಿ ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಸಾರ್ವಜನಿಕರು ಸಲ್ಲಿಸುವ ಮೇಲ್ಮನವಿಗಳಿಗೆ ಹಾಗೂ ಆಡಳಿತ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಸಲ್ಲಿಸುವ ಅರ್ಜಿಗಳ ಮಾಹಿತಿ ಪಡೆಯುವ ಬಗ್ಗೆ ವ್ಯವಸ್ಥಿತವಾಗಿ ನಿರ್ವಹಿಸಲು ಸಿಬ್ಬಂದಿ ವರ್ಗದವರನ್ನು ನಿಯೋಜಿಸಲಾಗಿದ್ದು, ಆ ಪ್ರಕಾರವಾಗಿ ಆರೋಗ್ಯಾಧಿಕಾರಿ (ಪಶ್ಚಿಮ) ರವರ ಕಛೇರಿ ವ್ಯಾಪ್ತಿಗೆ ಸಂಬಂಧಿಸಿದ ಮಾಹಿತಿಗಳನ್ನು ಕೋರಿ ಬಂದಂತಹ ಅರ್ಜಿಗಳನ್ನು ವಿಲೇವಾರಿ ಮಾಡಲಾಗುವುದು. ಈ ಕಾರ್ಯ ನೀತಿಯನ್ನು

ಉತ್ತಮಗೊಳಿಸುವ ಬಗ್ಗೆ ಗ್ರಾಹಕರ ವೇದಿಕೆ ಹಾಗೂ ಇತರೆ ಸೇವಾ ಸಂಸ್ಥೆಗಳ ಮತ್ತು ಬುದ್ಧಿ ಜೀವಿಗಳ ಜೊತೆ ಚರ್ಚಿಸಿ ಕಾರ್ಯ ವಿಧಾನವನ್ನು ಉತ್ತಮಗೊಳಿಸಲು ರೂಪು ರೇಷೆಗಳನ್ನು ಸಿದ್ದಪಡಿಸಲಾಗುತ್ತಿದೆ.

೯ ಮಂಡಳಿಗಳು ಪರಿಷತ್ತುಗಳು ಸಮಿತಿಗಳು ಅಥವಾ ಇತರೆ ನಿಕಾಯಗಳು ಮತ್ತು ಅವರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ ಪರಿಷತ್ತುಗಳ ಸಮಿತಿಗಳ ಮತ್ತು ಇತರೆ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತಾಯವಾಗಿರುವ ಎಂಬುದರ ವಿವರಪಟ್ಟಿ.

ಅನ್ವಯಿಸುವುದಿಲ್ಲ.

೧೦. ಮಾಹಿತಿ ಕೇಂದ್ರದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ನಿರ್ದೇಶಿಕೆ.

| ಕ್ರ ಸಂ. | ಹೆಸರು ಮತ್ತು ಹುದ್ದೆ | ಕಛೇರಿ ವಿಳಾಸ | ದೂರವಾಣಿ |
|---|---|---|---|
| ೧ | ಶ್ರೀಮತಿ ಡಾ॥ ಟಿ.ದೇವಕಿ ಉಮೇಶ್ | ಸಾರ್ವಜನಿಕ ಮಾಹಿತಿ ಹಕ್ಕು ಕಾಯ್ದೆ ಕೇಂದ್ರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪಶ್ಚಿಮ) ವಲಯದ ಆವರಣ, ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು. | ೨೨೯೭೫೬೫೦ |
| ೨ | ಶ್ರೀಮತಿ ಎಸ್.ನಾಗಲಕ್ಷ್ಮಿ ವ್ಯವಸ್ಥಾಪಕರು | ಸಾರ್ವಜನಿಕ ಮಾಹಿತಿ ಹಕ್ಕು ಕಾಯ್ದೆ ಕೇಂದ್ರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪಶ್ಚಿಮ) ವಲಯದ ಆವರಣ, ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು. | ೨೨೯೭೫೬೫೦ |
| ೩ | ಶ್ರೀಮತಿ ಪ್ರಮಿಳಾ ವರದಿಗಾರರು | ಸಾರ್ವಜನಿಕ ಮಾಹಿತಿ ಹಕ್ಕು ಕಾಯ್ದೆ ಕೇಂದ್ರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪಶ್ಚಿಮ) ವಲಯದ ಆವರಣ, ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು. | ೨೨೯೭೫೬೫೦ |
| ೪ | ಶ್ರೀ.ಎಸ್.ಮಂಜುನಾಥ ಪ್ರಥಮ ದರ್ಜೆ ಗುಮಾಸ್ತರು | ಸಾರ್ವಜನಿಕ ಮಾಹಿತಿ ಹಕ್ಕು ಕಾಯ್ದೆ ಕೇಂದ್ರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪಶ್ಚಿಮ) ವಲಯದ ಆವರಣ, ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು. | ೨೨೯೭೫೬೫೦ |
| ೫ | ಶ್ರೀ.ಜೆ.ಬೋರಯ್ಯ ದ್ವಿತೀಯ ದರ್ಜೆ ಗುಮಾಸ್ತರು | ಸಾರ್ವಜನಿಕ ಮಾಹಿತಿ ಹಕ್ಕು ಕಾಯ್ದೆ ಕೇಂದ್ರ, ಬೃಹತ್ ಬೆಂಗಳೂರು ಮಹಾನಗರ | ೨೨೯೭೫೬೫೦ |

| | | | |
|---|---|---|---|
| | | ಪಾಲಿಕೆ (ಪಶ್ಚಿಮ) ವಲಯದ ಆವರಣ, ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು. | |
| ೬ | ಶ್ರೀ.ಪಿ.ಮುರಳೀಧರನ್ ದ್ವಿತೀಯ ದರ್ಜೆ ಗುಮಾಸ್ತರು | ಸಾರ್ವಜನಿಕ ಮಾಹಿತಿ ಹಕ್ಕು ಕಾಯ್ದೆ ಕೇಂದ್ರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪಶ್ಚಿಮ) ವಲಯದ ಆವರಣ, ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು. | ೨೨೯೭೫೬೫೦ |

೧೧. ನಿಯಮಾನುಸಾರ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಪಡೆಯುತ್ತಿರುವ ಮಾಸಿಕ ವೇತನ ವಿವರಗಳು.

| ಕ್ರ ಸಂ. | ಹೆಸರು ಮತ್ತು ಹುದ್ದೆ | ವೇತನ ಶ್ರೇಣಿ |
|---|---|---|
| ೧ | ಡಾ|| ಟಿ.ದೇವಕಿ ಉಮೇಶ್ ಆರೋಗ್ಯಧಿಕಾರಿಗಳು | ೨೦೦೨೫–೨೮೨೭೫ |
| ೨ | ಎಸ್.ನಾಗಲಕ್ಷ್ಮಿ ವ್ಯವಸ್ಥಾಪಕರು | ೧೦೦೦೦–೧೮೧೫೦ |
| ೨ | ಎಸ್.ಪ್ರಮೀಳ ವರದಿಗಾರರು (ಓಓಡಿ) | ೧೦೦೦೦–೧೮೧೫೦ |
| ೩ | ಎಸ್.ಮಂಜುನಾಥ್ ಪ್ರಥಮ ದರ್ಜೆ ಸಹಾಯಕರು | ೭೨೭೫–೧೩೩೫೦ |
| ೪ | ಪಿ.ಮುರಳೀಧರ್ ದ್ವಿ.ದ.ಸ | ೫೮೦೦–೧೦೫೦೦ |
| ೫ | ಜೆ.ಬೋರಯ್ಯ ದ್ವಿ.ದ.ಸ | ೫೮೦೦–೧೦೫೦೦ |
| ೬ | ಸಿ.ಶಿವಲಿಂಗ ಚಾಲಕರು | ೫೮೦೦–೧೦೫೦೦ |
| ೭ | ಟಿ.ಕೃಷ್ಣವೇಣಿ ಆನೇ ದರ್ಜೆ ನೌಕರರು | ೫೨೦೦–೮೨೦೦ |
| ೮ | ಎಂ.ಗೋಪಿ ಆನೇ ದರ್ಜೆ ನೌಕರರು (ಓಓಡಿ) | ೫೨೦೦–೮೨೦೦ |